# ವರ್ಣಭೇದ ವಿರೋಧಿ (ಸಂಯುಕ್ತ ರಾಷ್ಟ್ರ ಒಡಂಬಡಿಕೆ) ಅಧಿನಿಯಮ, 1981

(1981ರ ಅಧಿನಿಯಮ ಸಂಖ್ಯೆ 48)

**[02-11-2004 ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 30 ನೇ ಸಂಪುಟದ 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 02 ರಿಂದ 04 ರವರೆಗಿನ ಪುಟಗಳಲ್ಲಿ ಪ್ರಕಟಿತ]**

## ವಿಷಯಾನುಕ್ರಮಣಿಕೆ

**ಪ್ರಕರಣಗಳು:**

1. ಚಿಕ್ಕ ಹೆಸರು ಮತ್ತು ವ್ಯಾಪ್ತಿ
2. ವರ್ಣಭೇದ ಅಪರಾಧದ ದಮನ ಮತ್ತು ಶಿಕ್ಷೆಗೆ ಸಂಬಂಧಿಸಿದ ಅಂತಾರಾಷ್ಟ್ರೀಯ ಒಡಂಬಡಿಕೆಯ ಅನ್ವಯ
3. ಅಂತಾರಾಷ್ಟ್ರೀಯ ಅಪರಾಧಿಕ ಹೊಣೆಗಾಗಿ ದಂಡನೆ ಕಂಪನಿಗಳಿಂದ
5. ಅಧಿವಿಚಾರಣೆಯ ಸ್ಥಳ
6. ದಸ್ತಗಿರಿ ಮಾಡಲು ಅಥವಾ ಪ್ರಾಸಿಕ್ಯೂಷನ್ ಜರುಗಿಸಲು ಕೇಂದ್ರ ಸರ್ಕಾರದ ಪೂರ್ವಮಂಜೂರಾತಿ
7. ಪ್ರತ್ಯರ್ಪಣ ಅಧಿನಿಯಮದ ಬಗ್ಗೆ ಉಪಬಂಧಗಳು

ಅನುಸೂಚಿ

# ವರ್ಣಭೇದ ವಿರೋಧಿ (ಸಂಯುಕ್ತ ರಾಷ್ಟ್ರ ಒಡಂಬಡಿಕೆ) ಅಧಿನಿಯಮ, 1981

(1981ರ ಅಧಿನಿಯಮ ಸಂಖ್ಯೆ 48)

[18ನೇ ಡಿಸೆಂಬರ್, 1981]

ವರ್ಣಭೇದ ಅಪರಾಧದ ದಮನ ಮತ್ತು ದಂಡನೆ ಕುರಿತ ಅಂತಾರಾಷ್ಟ್ರೀಯ ಒಡಂಬಡಿಕೆಯನ್ನು ಕಾರ್ಯರೂಪಕ್ಕೆ ತರುವ ಅಧಿನಿಯಮ.

ವರ್ಣಭೇದ ಅಪರಾಧದ ದಮನ ಮತ್ತು ದಂಡನೆ ಕುರಿತ ಅಂತಾರಾಷ್ಟ್ರೀಯ ಒಡಂಬಡಿಕೆಯನ್ನು ಸಂಯುಕ್ತ ರಾಷ್ಟ್ರಗಳ ಸಾಮಾನ್ಯ ಸಭೆಯು 1973ರ ನವೆಂಬರ್ 30ನೇ ದಿನದಂದು ಅಂಗೀಕರಿಸಿರುವುದರಿಂದ;

ಮತ್ತು ಭಾರತವು ಸದರಿ ಒಡಂಬಡಿಕೆಗೆ ಸಮ್ಮತಿಸಿದ್ದು, ಅದನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ಉಪಬಂಧಗಳನ್ನು ಮಾಡಬೇಕಾಗಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತೆರಡನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

**1. ಚಿಕ್ಕ ಹೆಸರು ಮತ್ತು ವ್ಯಾಪ್ತಿ.**- (1) ಈ ಅಧಿನಿಯಮವನ್ನು ವರ್ಣಭೇದ ವಿರೋಧಿ (ಸಂಯುಕ್ತ ರಾಷ್ಟ್ರ ಒಡಂಬಡಿಕೆ) ಅಧಿನಿಯಮ, 1981 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

**2. ವರ್ಣಭೇದ ಅಪರಾಧದ ದಮನ ಮತ್ತು ಶಿಕ್ಷೆಗೆ ಸಂಬಂಧಿಸಿದ ಅಂತಾರಾಷ್ಟ್ರೀಯ ಒಡಂಬಡಿಕೆಯ ಅನ್ವಯ.**- (1) ಯಾವುದೇ ಇತರ ಕಾನೂನಿನಲ್ಲಿ ತದ್ವಿರುದ್ಧವಾದುದು ಏನೇ ಇದ್ದರೂ, ವರ್ಣಭೇದ ಅಪರಾಧದ ದಮನ ಮತ್ತು ಶಿಕ್ಷೆಗೆ ಸಂಬಂಧಿಸಿದ ಅಂತಾರಾಷ್ಟ್ರೀಯ ಒಡಂಬಡಿಕೆಯ ಅನುಸೂಚಿಯಲ್ಲಿ ನಿರೂಪಿಸಿರುವಂಥ ಉಪಬಂಧಗಳಿಗೆ ಭಾರತದಲ್ಲಿ ಕಾನೂನು ಬಲ ಇರತಕ್ಕದ್ದು.

(2) ಕೇಂದ್ರ ಸರ್ಕಾರವು ಕಾಲಕಾಲಕ್ಕೆ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅನುಸೂಚಿಯಲ್ಲಿ ನಿರೂಪಿಸಿರುವ ಸದರಿ ಒಡಂಬಡಿಕೆಯ ಉಪಬಂಧಗಳಿಗೆ ಯುಕ್ತವಾಗಿ ಮಾಡಿದ ಮತ್ತು ಅಂಗೀಕರಿಸಿದ ಯಾವುದೇ ತಿದ್ದುಪಡಿಗಳ ಅನುಸಾರ, ಅನುಸೂಚಿಯನ್ನು ತಿದ್ದುಪಡಿ ಮಾಡಬಹುದು.

(3) (2)ನೇ ಉಪಪ್ರಕರಣದ ಮೇರೆಗೆ ಪ್ರತಿಯೊಂದು ಅಧಿಸೂಚನೆಯನ್ನು ಹೊರಡಿಸಿದ ತರುವಾಯ, ಆದಷ್ಟು ಬೇಗನೆ ಅದನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

**3. ಅಂತಾರಾಷ್ಟ್ರೀಯ ಆಪರಾಧಿಕ ಹೊಣೆಗಾಗಿ ದಂಡನೆ.**- ಅನುಸೂಚಿಯಲ್ಲಿ ನಿರೂಪಿಸಿರುವಂತೆ ಸದರಿ ಒಡಂಬಡಿಕೆಯ ಅನುಚ್ಛೇದ IIIರ ಮೇರೆಗೆ, ಅಂತಾರಾಷ್ಟ್ರೀಯ ಆಪರಾಧಿಕ ಹೊಣೆಯು ಯಾವ ವ್ಯಕ್ತಿಗೆ ಅನ್ವಯಿಸುತ್ತದೆಯೋ ಅಂತಹ ಪ್ರತಿಯೊಬ್ಬ ವ್ಯಕ್ತಿಯು ಮರಣ ದಂಡನೆ ಅಥವಾ ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಅವನು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**ವಿವರಣೆ:**- ಈ ಪ್ರಕರಣದ ಉದ್ದೇಶಗಳಿಗಾಗಿ "IIನೇ ಅನುಚ್ಛೇದಕ್ಕೆ" ಸದರಿ ಒಡಂಬಡಿಕೆಯ IIIನೇ ಅನುಚ್ಛೇದದ (ಎ) ಖಂಡದಲ್ಲಿ ಮಾಡಿದ ಉಲ್ಲೇಖವನ್ನು ಅನುಸೂಚಿಯಲ್ಲಿ ನಿರೂಪಿಸಿರುವಂತೆ ಆ ಒಡಂಬಡಿಕೆಯ IIನೇ ಅನುಚ್ಛೇದದ ಉಪಬಂಧಗಳಿಗೆ ಮಾಡಿದ ಉಲ್ಲೇಖವೆಂಬುದಾಗಿ ಅರ್ಥೈಸತಕ್ಕದ್ದು.

**4. ಕಂಪನಿಗಳಿಂದ, ಸಂಘಗಳಿಂದ ಅಥವಾ ಸಂಸ್ಥೆಗಳಿಂದ ಅಪರಾಧಗಳು.**- ಈ ಅಧಿನಿಯಮದ ಮೇರೆಗಿನ ಒಂದು ಅಪರಾಧವನ್ನು ಒಂದು ಕಂಪನಿಯು ಅಥವಾ ಒಂದು ಸಂಘಟನೆಯು ಅಥವಾ ಒಂದು ಸಂಸ್ಥೆಯು ಮಾಡಿದ್ದರೆ, ಅಂಥ ಅಪರಾಧವು ನಡೆದ ಸಮಯದಲ್ಲಿ ಸಂದರ್ಭಾನುಸಾರ ಆ ಕಂಪನಿಯ, ಸಂಘಟನೆಯ ಅಥವಾ ಸಂಸ್ಥೆಯ ಪ್ರಭಾರದಲ್ಲಿದ್ದ ಅಥವಾ ಅದರ ವ್ಯವಹಾರ ಅಥವಾ ಕಾರ್ಯಕಲಾಪಗಳನ್ನು ನಡೆಸಲು

ಜವಾಬ್ದಾರನಾಗಿರುವ ಪ್ರತಿಯೊಬ್ಬ ವ್ಯಕ್ತಿಯನ್ನು ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವನು ತನ್ನ ವಿರುದ್ಧದ ಕಾನೂನು ಕ್ರಮಕ್ಕೆ ಗುರಿಯಾಗತಕ್ಕದ್ದು ಹಾಗೂ ತದನುಸಾರವಾಗಿ ದಂಡನೆಗೆ ಗುರಿಯಾಗತಕ್ಕದ್ದು:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ, ಅಂಥ ಯಾರೇ ವ್ಯಕ್ತಿಯು, ಆ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಗಟ್ಟಲು ತಾನು ಎಲ್ಲ ಯುಕ್ತ ಜಾಗರೂಕತೆಯನ್ನು ವಹಿಸಿದ್ದೆನೆಂದು ರುಜುವಾತುಪಡಿಸಿದರೆ, ಈ ಅಧಿನಿಯಮದಲ್ಲಿ ಉಪಬಂಧಿಸಿದ ಯಾವುದೇ ದಂಡನೆಗೆ ಅವನನ್ನು ಗುರಿಪಡಿಸತಕ್ಕದ್ದಲ್ಲ.

ವಿವರಣೆ:- ಈ ಪ್ರಕರಣದ ಉದ್ದೇಶಗಳಿಗಾಗಿ ಕಂಪನಿ ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಇದು ಒಂದು ಫರ್ಮ್ ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ.

**5. ಅಧಿವಿಚಾರಣೆಯ ಸ್ಥಳ.**- 3ನೇ ಪ್ರಕರಣದ ಮೇರೆಗಿನ ಅಪರಾಧವನ್ನು ಮಾಡುವ ಯಾರೇ ವ್ಯಕ್ತಿಯು ಕಂಡುಬರಬಹುದಾದಂತಹ ಯಾವುದೇ ಸ್ಥಳದಲ್ಲಿ ಅಥವಾ ಕೇಂದ್ರ ಸರ್ಕಾರವು ಈ ಕುರಿತು ರಾಜಪತ್ರದಲ್ಲಿ ಪ್ರಕಟಿಸಿದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದೇಶಿಸಬಹುದಾದಂಥ ಇತರ ಸ್ಥಳದಲ್ಲಿ ಆ ಅಪರಾಧಕ್ಕಾಗಿ ಅವನನ್ನು ಅಧಿವಿಚಾರಣೆ ಮಾಡಬಹುದು.

**6. ದಸ್ತಗಿರಿ ಮಾಡಲು ಅಥವಾ ಪ್ರಾಸಿಕ್ಯೂಷನ್ ಜರುಗಿಸಲು ಕೇಂದ್ರ ಸರ್ಕಾರದ ಪೂರ್ವ ಮಂಜೂರಾತಿ.**- 3ನೇ ಪ್ರಕರಣದ ಮೇರೆಗಿನ ಯಾವುದೇ ಅಪರಾಧದ ಸಂಬಂಧದಲ್ಲಿ ಕೇಂದ್ರ ಸರ್ಕಾರದ ಅಥವಾ ಆ ಸರ್ಕಾರವು ಈ ಕುರಿತು ಲಿಖಿತ ಆದೇಶದ ಮೂಲಕ ಅಧಿಕೃತಗೊಳಿಸಬಹುದಾದಂಥ ಅಧಿಕಾರಿಯಿಂದ ಅಥವಾ ಪ್ರಾಧಿಕಾರದಿಂದ ಪೂರ್ವ ಮಂಜೂರಾತಿ ಪಡೆಯದೆ ಯಾರೇ ವ್ಯಕ್ತಿಯನ್ನು ದಸ್ತಗಿರಿ ಮಾಡತಕ್ಕದ್ದಲ್ಲ ಅಥವಾ ಆತನ ವಿರುದ್ಧ ಪ್ರಾಸಿಕ್ಯೂಷನ್ ಜರುಗಿಸತಕ್ಕದ್ದಲ್ಲ.

**7. ಪ್ರತ್ಯರ್ಪಣ ಅಧಿನಿಯಮದ ಬಗ್ಗೆ ಉಪಬಂಧಗಳು.**- ಪ್ರತ್ಯರ್ಪಣ ಅಧಿನಿಯಮ, 1962ರ ಉದ್ದೇಶಗಳಿಗಾಗಿ, 3ನೇ ಪ್ರಕರಣದ ಮೇರೆಗಿನ ಅಪರಾಧವನ್ನು ರಾಜಕೀಯ ಸ್ವರೂಪದ ಅಪರಾಧವೆಂದು ಪರಿಗಣಿಸತಕ್ಕುದಲ್ಲ.

**ಅನುಸೂಚಿ**

**(2 ಮತ್ತು 3ನೇ ಪ್ರಕರಣಗಳನ್ನು ನೋಡಿ)**

ವರ್ಣಭೇದ ಅಪರಾಧದ ದಮನ ಮತ್ತು ಶಿಕ್ಷೆ ಕುರಿತ ಅಂತಾರಾಷ್ಟ್ರೀಯ ಒಡಂಬಡಿಕೆಯಲ್ಲಿನ ಕಾನೂನು ಬಲ ಹೊಂದಿರುವಂತಹ ಉಪಬಂಧಗಳು.

ಅನುಚ್ಛೇದ-II

ಪ್ರಸ್ತುತ ಒಡಂಬಡಿಕೆಯ ಉದ್ದೇಶಕ್ಕಾಗಿ, ದಕ್ಷಿಣ ಆಫ್ರಿಕಾದಲ್ಲಿ ಆಚರಣೆಯಲ್ಲಿರುವ ಜನಾಂಗೀಯ ಪ್ರತ್ಯೇಕೀಕರಣ ಮತ್ತು ತಾರತಮ್ಯಕ್ಕೆ ಸಮಾನವಾದ ಕಾರ್ಯನೀತಿಗಳನ್ನು ಮತ್ತು ಆಚರಣೆಗಳನ್ನು ಒಳಗೊಂಡಿರತಕ್ಕ "ವರ್ಣಭೇದ ಅಪರಾಧ" ಎಂಬ ಪದಾವಳಿಯು, ಒಂದು ಜನಾಂಗೀಯ ತಂಡದ ಜನರು ಯಾವುದೇ ಇತರ ಜನಾಂಗೀಯ ತಂಡದ ಜನರ ಮೇಲೆ ಪ್ರಾಬಲ್ಯವನ್ನು ಸ್ಥಾಪಿಸುವ, ಮುಂದುವರೆಸಿಕೊಂಡು ಹೋಗುವ ಮತ್ತು ಅವರನ್ನು ವ್ಯವಸ್ಥಿತವಾಗಿ ಪೀಡಿಸುವ ಉದ್ದೇಶದಿಂದ ಮಾಡುವ ಈ ಕೆಳಕಂಡ ಅಮಾನವೀಯ ಕೃತ್ಯಗಳಿಗೆ ಅನ್ವಯಿಸತಕ್ಕದ್ದು:

(ಎ) ಈ ಕೆಳಕಂಡ ರೀತಿಗಳಲ್ಲಿ ಒಂದು ಜನಾಂಗೀಯ ತಂಡದ ಅಥವಾ ತಂಡಗಳ ಸದಸ್ಯನಿಗೆ ಅಥವಾ ಸದಸ್ಯರಿಗೆ ಜೀವಿಸುವ ಹಕ್ಕಿನ ಮತ್ತು ವ್ಯಕ್ತಿ ಸ್ವಾತಂತ್ರ್ಯದ ನಿರಾಕರಣೆ:-

(i) ಒಂದು ಜನಾಂಗೀಯ ತಂಡದ ಅಥವಾ ತಂಡಗಳ ಸದಸ್ಯರನ್ನು ಕೊಲೆ ಮಾಡುವ ಮೂಲಕ;

(ii) ಒಂದು ಜನಾಂಗೀಯ ತಂಡದ ಅಥವಾ ತಂಡಗಳ ಸದಸ್ಯರ ಮೇಲೆ ತೀವ್ರತರ ದೈಹಿಕ ಅಥವಾ ಮಾನಸಿಕ ಹಾನಿಯನ್ನು ಉಂಟು ಮಾಡುವ ಮೂಲಕ, ಅವರ ಸ್ವಾತಂತ್ರ್ಯ ಅಥವಾ ಘನತೆಗೆ

ಭಂಗ ತರುವ ಮೂಲಕ ಅಥವಾ ಅವರನ್ನು ಚಿತ್ರಹಿಂಸೆಗೆ ಅಥವಾ ಕ್ರೂರವಾದ, ಅಮಾನವೀಯವಾದ ಅಥವಾ ಹೀನಾಯ ನಡವಳಿಕೆಗೆ ಅಥವಾ ದಂಡನೆಗೆ ಗುರಿಪಡಿಸುವುದು;

(iii) ಜನಾಂಗೀಯ ತಂಡ ಅಥವಾ ತಂಡಗಳ ಸದಸ್ಯರನ್ನು ನಿರಂಕುಶವಾಗಿ ದಸ್ತಗಿರಿ ಮಾಡುವ ಮತ್ತು ಕಾನೂನು ಬಾಹಿರವಾಗಿ ಕಾರಾವಾಸಕ್ಕೊಳಪಡಿಸುವ ಮೂಲಕ;

(ಬಿ) ಒಂದು ಜನಾಂಗೀಯ ತಂಡವನ್ನು ಅಥವಾ ತಂಡಗಳನ್ನು ಪೂರ್ಣವಾಗಿ ಅಥವಾ ಭಾಗಶಃ ದೈಹಿಕವಾಗಿ ನಾಶಗೊಳಿಸುವ ಉದ್ದೇಶದಿಂದ ಅದರ ಅಥವಾ ಅವುಗಳ ಮೇಲೆ ಉದ್ದೇಶಪೂರ್ವಕವಾಗಿ ಜೀವನ ಸ್ಥಿತಿಗತಿಗಳನ್ನು ಹೇರುವುದು;

* * *

(ಇ) ಒಂದು ಜನಾಂಗೀಯ ತಂಡದ ಅಥವಾ ತಂಡಗಳ ಸದಸ್ಯರನ್ನು ವಿಶೇಷವಾಗಿ ಬಲಾತ್ಕಾರದ ದುಡಿಮೆಗೆ ಗುರಿಪಡಿಸುವ ಮೂಲಕ ಅವರ ದುಡಿಮೆಯನ್ನು ಶೋಷಣೆ ಮಾಡುವುದು;

(ಎಫ್) ಸಂಘಟನೆಗಳು ಮತ್ತು ವ್ಯಕ್ತಿಗಳು ವರ್ಣಭೇದವನ್ನು ವಿರೋಧಿಸುತ್ತಾರೆಂಬ ಕಾರಣಕ್ಕಾಗಿ ಅವುಗಳ / ಅವರ ಮೂಲಭೂತ ಹಕ್ಕುಗಳನ್ನು ಮತ್ತು ಸ್ವಾತಂತ್ರ್ಯಗಳನ್ನು ಕಸಿದುಕೊಳ್ಳುವ ಮೂಲಕ ಅವುಗಳಿಗೆ ಮತ್ತು ಅವರಿಗೆ ಕಿರುಕುಳ ಕೊಡುವುದು.

## ಅನುಚ್ಛೇದ–III

ವ್ಯಕ್ತಿಗಳು, ಸಂಘಟನೆಗಳ ಮತ್ತು ಸಂಸ್ಥೆಗಳ ಸದಸ್ಯರು ಮತ್ತು ರಾಷ್ಟ್ರದ ಪ್ರತಿನಿಧಿಗಳು, ಅಪರಾಧ ಕೃತ್ಯಗಳನ್ನು ಮಾಡಲಾದಂಥ ರಾಷ್ಟ್ರದ ರಾಜ್ಯಕ್ಷೇತ್ರದಲ್ಲಿ ನೆಲೆಸಿರಲಿ ಅಥವಾ ಬೇರೆ ಇತರ ರಾಷ್ಟ್ರದಲ್ಲಿ ನೆಲಸಿರಲಿ ಅವರು,–

(ಎ) ಪ್ರಸ್ತುತ ಒಡಂಬಡಿಕೆಯ ಅನುಚ್ಛೇದ– ೩೩ ರಲ್ಲಿ ನಮೂದಿಸಿರುವ ಕೃತ್ಯಗಳನ್ನು ಮಾಡಿದಾಗಲೆಲ್ಲಾ, ಅವುಗಳಲ್ಲಿ ಭಾಗವಹಿಸಿದಾಗಲೆಲ್ಲಾ, ಅವುಗಳನ್ನು ಮಾಡಲು ನೇರವಾಗಿ ಚಿತಾವಣೆ ಮಾಡಿದಾಗಲೆಲ್ಲಾ ಅಥವಾ ಪಿತೂರಿ ಮಾಡಿದಾಗಲೆಲ್ಲಾ;

(ಬಿ) ವರ್ಣಭೇದ ಅಪರಾಧವನ್ನು ಮಾಡಲು ನೇರವಾಗಿ ದುಷ್ಪ್ರೇರಣೆ ಮಾಡಿದಾಗಲೆಲ್ಲಾ, ಪ್ರೋತ್ಸಾಹಿಸಿದಾಗಲೆಲ್ಲಾ ಅಥವಾ ಸಹಕರಿಸಿದಾಗಲೆಲ್ಲಾ

– ಅವರ ಉದ್ದೇಶ ಏನಾದರೂ ಆಗಿರಲಿ, ಅವರಿಗೆ ಅಂತಾರಾಷ್ಟ್ರೀಯ ಆಪರಾಧಿಕ ಹೊಣೆಯು ಅನ್ವಯವಾಗತಕ್ಕದ್ದು.

* * *